





# ಕಳೆಗಿಡಗಳ ಜೀವಕಳೆ!

■ ಚಿತ್ರ– ಬರಹ:
**ಅಶೋಕ ಉಚ್ಚಂಗಿ**

**ಹೊ**ಲ ಗದ್ದೆಗಳಲ್ಲಿ ಬಿತ್ತಿದ್ದ ಭತ್ತ, ಕಬ್ಬು, ಜೋಳಗಳು ಹಸಿರು ಬಣ್ಣವನ್ನೆಲ್ಲ ಮೆತ್ತಿಕೊಂಡು ಕಣ್ಣು ಹಾಯಿದಷ್ಟು ದೂರಕ್ಕೂ ಹಸಿರ ಹಾಸಿಗೆಯಂತೆ ಹಬ್ಬಿರುತ್ತವೆ. ನರ್ಸರಿಯಲ್ಲಿ ಸಸಿಯಾಗಿದ್ದ ತೆಂಗು, ಅಡಿಕೆ, ಕಾಫಿ, ಏಲಕ್ಕಿ ಗಿಡಗಳು, ಮತ್ತು ಅಂಗಳದಲ್ಲಿ, ಹೂಕುಂಡಗಳಲ್ಲಿ ನೆಟ್ಟಿದ್ದ ಹೂವಿನ ಗಿಡ, ಕಡ್ಡಿ, ಗೆಡ್ಡೆಗಳನ್ನು ಮಳೆ ಮೈದಡವಿದ ಪರಿಣಾಮ ಬಣ್ಣಬಣ್ಣದ ಹೂಗಳನ್ನು ಅರಳಿಸಿ ನಗುತ್ತವೆ. ಮಳೆರಾಯನ ಮಾಂತ್ರಿಕ ಸ್ಪರ್ಶದ ಈ ಬೆರಗನ್ನೆಲ್ಲ ಹೆಮ್ಮೆಯಿಂದ ನೋಡುತ್ತೇವೆ, ಪ್ರೀತಿಯಿಂದ ಮೈದಡವುತ್ತೇವೆ. ಮಕ್ಕಳಂತೆ ಕಾಣುತ್ತೇವೆ.

ಆದರೆ ವರ್ಷಧಾರೆಗೆ, ನಿಸರ್ಗಕ್ಕೆ ಈ ಗಿಡ, ಮರ–ಬಳ್ಳಿಗಳಂತೆ ಇನ್ನೂ ಅನೇಕ ಮಕ್ಕಳಿದ್ದಾರೆ. ನಿಸರ್ಗ ಯಾವುದೇ ಬೇಧವೆಣಿಸದೆ ಅವನ್ನೂ ತನ್ನ ಪ್ರೀತಿಯಲ್ಲಿ ಪೊರೆಯುತ್ತದೆ. ಇವುಗಳನ್ನು ಕಳೆ ಗಿಡಗಳೆಂದು, ಕಾಡು ಗಿಡಗಳೆಂದು ತಾತ್ಸಾರದಿಂದ ಕಾಣುತ್ತೇವೆ. ಇವುಗಳ ನಿರ್ಮೂಲಕ್ಕಾಗಿ ಟೊಂಕ ಕಟ್ಟುತ್ತೇವೆ.

ರಸ್ತೆಯಂಚಲ್ಲಿ, ಖಾಲಿ ಸೈಟುಗಳಲ್ಲಿ, ಶಿಥಿಲ ಕಟ್ಟಡಗಳಲ್ಲಿ, ಕಾಡಿನ ಸೆರಗಿನಲ್ಲಿ, ಬಂಡೆಗಳ ಬೆನ್ನಲ್ಲಿ, ಹರಿವ ನೀರಿನ ಪಕ್ಕದಲ್ಲಿ.. ಹೀಗೆ ನಿರ್ಲಕ್ಷಿತ ಸ್ಥಳಗಳಲ್ಲಿ ಪುಟಿದೆದ್ದು ಬೆಳೆಯುವ ಕಳೆಗಿಡಗಳನ್ನು ಒಮ್ಮೆ ಗಮನವಿಟ್ಟು ನೋಡಿ. ಇವುಗಳೂ ಚೆಲುವಿನ ಖನಿಗಳಂತೆ. ಇವುಗಳ ಎಲೆ, ಹೂವು, ಹಣ್ಣುಗಳು ತಮ್ಮ ಸೊಬಗಿನಿಂದಲೇ ಮಳೆಗಾಲದ ಈ ದಿನಗಳಲ್ಲಿ ನಿಸರ್ಗಕ್ಕೆ ವಿಶೇಷ ಕಳೆ ನೀಡುತ್ತವೆ. ಬಗೆಬಗೆ ಬಣ್ಣದ ಹೂಗಳು, ಆಕರ್ಷಕ ರೂಪದ ಎಲೆಗಳು ಮನ ಸೆಳೆಯುತ್ತವೆ. ಅವಕಾಶ ಸಿಕ್ಕರೆ ಬೆಳೆದು ಬದುಕುವ ತಾಖತ್ತು ಈ ಸಸ್ಯಗಳಿಗಿದೆ. ಅಸಂಖ್ಯ ಕ್ರಿಮಿ ಕೀಟ, ಪ್ರಾಣಿ ಪಕ್ಷಿಗಳನ್ನು ಸಲಹುವ ಶಕ್ತಿ ಕಳೆಯೆಂದು ಹೀಗಳೆಯುವ ಈ ಸಸ್ಯರಾಶಿಗಿದೆ.

ಈ ಗಿಡಬಳ್ಳಿಗಳಿಗೆ ಔಷಧೀಯ ಗುಣಗಳೂ ಇವೆ. ಬೆಳೆಯುವ ಮುನ್ನವೇ ಮುರುಟಿ ಹೋಗುವ ಈ ಕಳೆಗಿಡಗಳು ಮಳೆಯಲ್ಲಿ ಮೀಯುತ್ತಾ ನಿಂತು ತಮ್ಮ ಸೌಂದರ್ಯ ಪ್ರದರ್ಶಿಸುವ ಜೊತೆಗೆ ನಿಸರ್ಗಕ್ಕೆ ಜೀವಕಳೆ ತರುತ್ತವೆ. ●